ವಿಧಾನ ಪರಿಷತ್ತು

| | |
|---|---|
| ಪ್ರಶ್ನೆಸಂಖ್ಯೆ:- | 776 |
| ಸದಸ್ಯರಹೆಸರು:- | ಶ್ರೀ ಶಶೀಲ್ ನಮೋಶಿ (ಶಿಕ್ಷಕರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ:- | 16/12/2024 |
| ಉತ್ತರಿಸಬೇಕಾದ ಸಚಿವರು:- | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಬಳ್ಳಾರಿ ಜಿಲ್ಲೆಯಲ್ಲಿರುವ ಸರ್ಕಾರಿ ಆಸ್ಪತ್ರೆಗಳ ಸಂಖ್ಯೆ ಎಷ್ಟು; ಅಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವೈದ್ಯಾಧಿಕಾರಿಗಳ ಸಂಖ್ಯೆ ಎಷ್ಟು (ಮಾಹಿತಿ ನೀಡುವುದು) | **ಬಳ್ಳಾರಿ ಜಿಲ್ಲೆಯಲ್ಲಿರುವ ಸರ್ಕಾರಿ ಆಸ್ಪತ್ರೆಗಳ ವಿವರ ಈ ಕೆಳಕಂಡಂತಿದೆ.**<br><br>1. ಜಿಲ್ಲಾ ಆಸ್ಪತ್ರೆ – 01<br>2. ತಾಯಿ ಮತ್ತು ಮಕ್ಕಳ ಆಸ್ಪತ್ರೆ -01<br>3. ಸಾರ್ವಜನಿಕ ಆಸ್ಪತ್ರೆಗಳ ಸಂಖ್ಯೆ-02<br><br>4.ಸಮುದಾಯ ಆರೋಗ್ಯ ಕೇಂದ್ರಗಳ ಸಂಖ್ಯೆ -30<br>5. ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸಂಖ್ಯೆ -31<br><br>**ಒಟ್ಟು = 65**<br><br>**ಬಳ್ಳಾರಿಜಿಲ್ಲೆಯಲ್ಲಿರುವಆಸ್ಪತ್ರೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವೈದ್ಯಾಧಿಕಾರಿಗಳ ವಿವರ ಈ ಕೆಳಕಂಡಂತಿದೆ.**<br><br>1. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು -1<br>2. ಜಿಲ್ಲಾ ಕಾರ್ಯಕ್ರಮಾಧಿಕಾರಿಗಳು -6<br>3. ಜಿಲ್ಲಾ ಆಸ್ಪತ್ರೆಯಲ್ಲಿ – 30<br>4. ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ-01<br>5. ಸಾರ್ವಜನಿಕ ಆಸ್ಪತ್ರೆಗಳಲ್ಲಿ -15<br>6. ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ -21<br>7. ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ -27<br><br>**ಒಟ್ಟು = 101**<br><br>ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ವ್ಯಾಪ್ತಿಯಲ್ಲಿ ಬರುವ ಆಸ್ಪತ್ರೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ವೈದ್ಯಾಧಿಕಾರಿಗಳ ವಿವರಗಳನ್ನು **ಅನುಬಂಧ-1ರಲ್ಲಿ** ನೀಡಲಾಗಿದೆ.<br>ಜಿಲ್ಲಾ ಆಸ್ಪತ್ರೆ, ಬಳ್ಳಾರಿ ಇಲ್ಲಿ ಕಾರ್ಯನಿರ್ವಹಿಸುತ್ತಿರುವ ವೈದ್ಯಾಧಿಕಾರಿಗಳ ವಿವರಗಳನ್ನು **ಅನುಬಂಧ-2ರಲ್ಲಿ** ನೀಡಲಾಗಿದೆ.<br><br>(NHM ಗುತ್ತಿಗೆ ವೈದ್ಯರು 61 ಮತ್ತು ಜಿಲ್ಲಾಧಿಕಾರಿಗಳ ಆದೇಶದನ್ವಯ ಗುತ್ತಿಗೆ 09 ವೈದ್ಯರನ್ನುಹೊರೆತುಪಡಿಸಿ). |
| ಆ | ಬಳ್ಳಾರಿ ಜಿಲ್ಲೆಯಲ್ಲಿ ಕಳೆದ ಕೆಲವು ದಿನಗಳಿಂದ ಬಾಣಂತಿಯರ ಸಾವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ | ಬಂದಿದೆ. |

| | | |
|---|---|---|
| ಇ | ಕಳೆದ 02 ತಿಂಗಳುಗಳಿಂದ ಒಟ್ಟು ಎಷ್ಟು ಜನ ಬಾಣಂತಿಯರು ಸಾವಿಗೀಡಾಗಿದ್ದಾರೆ: | ಕಳೆದ 2 ತಿಂಗಳಿನಿಂದ ಒಟ್ಟು 10 ಬಾಣಂತಿಯರು ಸಾವಿಗೀಡಾಗಿದ್ದಾರೆ |
| ಈ | ಇತ್ತೀಚಿನ ದಿನಗಳಲ್ಲಿ ಬಳ್ಳಾರಿ ಜಿಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿಯೇ ಬಾಣಂತಿಯರ ಸಾವು ಸಂಭವಿಸುತ್ತಿರುವುದಕ್ಕೆ ಕಾರಣಗಳೇನು: ಈ ಕುರಿತು ಸರ್ಕಾರ ಯಾವ ರೀತಿ ಕ್ರಮ ಕೈಗೊಳ್ಳುತ್ತದೆ ಹಾಗೂ ಇದಕ್ಕೆ ಸಂಬಂಧಪಟ್ಟ ವೈದ್ಯಾಧಿಕಾರಿಗಳ ಮೇಲೆ ಇಲ್ಲಿಯವರೆಗೆ ಯಾವ ಕ್ರಮಕೈಗೊಳ್ಳಲಾಗಿದೆ? (ಪೂರ್ಣ ಮಾಹಿತಿ ನೀಡುವುದು) | ಬಾಣಂತಿಯರ ಸಾವಿಗೆ ವೈದ್ಯರ ನಿರ್ಲಕ್ಷ್ಯ ಕಂಡು ಬಂದಿರುವುದಿಲ್ಲ. ಶಸ್ತ್ರಚಿಕಿತ್ಸೆಗೆ ಬಳಸಿರುವ IV Ringer Lactate ಗುಣಮಟ್ಟವನ್ನು ಶಂಕಿಸಲಾಗಿರುತ್ತದೆ.<br><br>ಸರ್ಕಾರವು ತೆಗೆದುಕೊಂಡಿರುವ ಕ್ರಮವನ್ನು **ಅನುಬಂಧ-3**ರಲ್ಲಿ ನೀಡಲಾಗಿದೆ. |

**ಆಕುಕ 153 ಎಸ್‌ಎಂಎಂ 2024**

**(ದಿನೇಶ್ ಗುಂಡೂರಾವ್)**
**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು**

ಅನುಬಂಧ-1

## ಅನುಬಂಧ-1

### ಬಳ್ಳಾರಿ ಜಿಲ್ಲೆಯ 'ಎ' ವೃಂದ ಅಧಿಕಾರಿಗಳ / ವೈದ್ಯರ / ತಜ್ಞ ವೈದ್ಯರುಗಳ ಮಂಜೂರು, ಕಾರ್ಯನಿರತ ಮತ್ತು ಖಾಲಿ ಹುದ್ದೆಗಳ ಮಾಹಿತಿ ದಿನಾಂಕ:12.12. 2024 ರಲ್ಲಿರುವಂತೆ

| ಕ್ರ.ಸಂ | ಸಂಸ್ಥೆ | ಸಮೂಹ | | | | |
|---|---|---|---|---|---|---|
| | | ಪದನಾಮ | ಮಂಜೂರು | ಕಾರ್ಯನಿರತ | ಖಾಲಿ | ಷರಾ |
| | | ಗ್ರೂಪ್ ಎ | | | | |
| | | ಬಳ್ಳಾರಿ ತಾಲ್ಲೂಕು | | | | |
| 1 | ಜಿಲ್ಲಾ ಆರೋಗ್ಯ ಮತ್ತು ಕು.ಕ.ಕಛೇರಿ, ಬಳ್ಳಾರಿ | ಜಿಲ್ಲಾ ಆರೋಗ್ಯ ಮತ್ತು ಕು.ಕ ಅಧಿಕಾರಿಗಳು | 1 | 1 | 0 | |
| 2 | ಜಿಲ್ಲಾ ಆರೋಗ್ಯ ಮತ್ತು ಕು.ಕ.ಕಛೇರಿ, ಬಳ್ಳಾರಿ | ಜಿಲ್ಲಾ ಕು.ಕ ಅಧಿಕಾರಿಗಳು | 1 | 1 | 0 | |
| 3 | ಜಿಲ್ಲಾ ಆರೋಗ್ಯ ಮತ್ತು ಕು.ಕ.ಕಛೇರಿ, ಬಳ್ಳಾರಿ | ಜಿಲ್ಲಾ ಆರ್.ಸಿ.ಹೆಚ್.ಅಧಿಕಾರಿಗಳು | 1 | 1 | 0 | |
| 4 | ಜಿಲ್ಲಾ ಕುಷ್ಠರೋಗ ನಿಯಂತ್ರಣಾಧಿಕಾರಿಗಳು ಕಛೇರಿ ಬಳ್ಳಾರಿ | ಜಿಲ್ಲಾ ಕುಷ್ಠರೋಗ ನಿಯಂತ್ರಣಾಧಿಕಾರಿಗಳು | 1 | 1 | 0 | |
| 5 | ಜಿಲ್ಲಾ ಮಲೇರಿಯ ಅಧಿಕಾರಿಗಳು, ಬಳ್ಳಾರಿ | ಜಿಲ್ಲಾ ಮಲೇರಿಯ ಅಧಿಕಾರಿಗಳು | 1 | 1 | 0 | |
| 6 | ಜಿಲ್ಲಾ ಕ್ಷಯರೋಗ ನಿಯಂತ್ರಣ ಕೇಂದ್ರ ಬಳ್ಳಾರಿ | ವೈದ್ಯಾಧಿಕಾರಿಗಳು | 1 | 1 | 0 | |
| 7 | ಜಿಲ್ಲಾ ಸರ್ವೇಕ್ಷಣಾ ಘಟಕ,ಬಳ್ಳಾರಿ | ಜಿಲ್ಲಾ ಸರ್ವೇಕ್ಷಣಾ ಅಧಿಕಾರಿಗಳು | 1 | 1 | 0 | |
| 8 | ಜಿಲ್ಲಾ ತಂಬಾಕು ನಿಯಂತ್ರಣ ತಂಡ, ಬಳ್ಳಾರಿ | ವೈದ್ಯಾಧಿಕಾರಿಗಳು | 1 | 0 | 1 | |
| 9 | ಜಿಲ್ಲಾ ಅಂಕಿತ ಅಧಿಕಾರಿಗಳ ಕಛೇರಿ, ಬಳ್ಳಾರಿ | ಜಿಲ್ಲಾ ಅಂಕಿತ ಅಧಿಕಾರಿಗಳು | 1 | 0 | 1 | |
| | ಒಟ್ಟು | | 9 | 7 | 2 | |
| 1 | ತಾಲೂಕ ಆರೋಗ್ಯಾಧಿಕಾರಿಗಳ ಕಛೇರಿ, ಬಳ್ಳಾರಿ | ತಾಲೂಕ ಆರೋಗ್ಯಾಧಿಕಾರಿಗಳು ಬಳ್ಳಾರಿ | 1 | 0 | 1 | |
| 2 | ತಾಲೂಕ ಆರೋಗ್ಯಾಧಿಕಾರಿಗಳ ಕಛೇರಿ, ಸಿರುಗುಪ್ಪ | ತಾಲೂಕ ಆರೋಗ್ಯಾಧಿಕಾರಿಗಳು ಬಳ್ಳಾರಿ | 1 | 1 | 0 | |
| 3 | ತಾಲೂಕ ಆರೋಗ್ಯಾಧಿಕಾರಿಗಳ ಕಛೇರಿ, ಸಂಡೂರು | ತಾಲೂಕ ಆರೋಗ್ಯಾಧಿಕಾರಿಗಳು ಬಳ್ಳಾರಿ | 1 | 0 | 1 | |
| | ಒಟ್ಟು | | 3 | 1 | 2 | |
| 1 | ಪ್ರಾಥಮಿಕ ಆರೋಗ್ಯ ಕೇಂದ್ರ ಆಶ್ರಯ ಕಾಲೋನಿ, ಬಳ್ಳಾರಿ | ವೈದ್ಯಾಧಿಕಾರಿಗಳು | 1 | 1 | 0 | |
| 2 | ಪ್ರಾಥಮಿಕ ಆರೋಗ್ಯ ಕೇಂದ್ರ ಎಮ್-ಗೋನಾಳ್ | ವೈದ್ಯಾಧಿಕಾರಿಗಳು | 1 | 0 | 1 | (ಗು.ಆ.) (ಜಿಲ್ಲಾಧಿಕಾರಿಗಳ ನೇಮಕಾತಿ) |
| 3 | ಪ್ರಾಥಮಿಕ ಆರೋಗ್ಯ ಕೇಂದ್ರ ಕೊರ್ಲಗುಂದಿ | ವೈದ್ಯಾಧಿಕಾರಿಗಳು | 1 | 1 | 0 | |
| 4 | ಪ್ರಾಥಮಿಕ ಆರೋಗ್ಯ ಕೇಂದ್ರ ಶಿಡಿಗಿನಮೊಳ | ವೈದ್ಯಾಧಿಕಾರಿಗಳು | 1 | 1 | 0 | |
| 5 | ಪ್ರಾಥಮಿಕ ಆರೋಗ್ಯ ಕೇಂದ್ರ ಸಂಗನಕಲ್ಲು | ವೈದ್ಯಾಧಿಕಾರಿಗಳು | 1 | 1 | 0 | |
| 6 | ಪ್ರಾಥಮಿಕ ಆರೋಗ್ಯ ಕೇಂದ್ರ ಚೆಳ್ಳಗುರ್ಕಿ | ವೈದ್ಯಾಧಿಕಾರಿಗಳು | 1 | 1 | 0 | |
| 7 | ಪ್ರಾಥಮಿಕ ಆರೋಗ್ಯ ಕೇಂದ್ರ ಯರ್ರಗುಡಿ | ವೈದ್ಯಾಧಿಕಾರಿಗಳು | 1 | 1 | 0 | |
| 8 | ಪ್ರಾಥಮಿಕ ಆರೋಗ್ಯ ಕೇಂದ್ರ ಹಲಕುಂದಿ | ವೈದ್ಯಾಧಿಕಾರಿಗಳು | 1 | 0 | 1 | (ಗು.ಆ.) (ಜಿಲ್ಲಾಧಿಕಾರಿಗಳ ನೇಮಕಾತಿ) |
| 9 | ಪ್ರಾಥಮಿಕ ಆರೋಗ್ಯ ಕೇಂದ್ರ ಸಿಂಧವಾಳ | ವೈದ್ಯಾಧಿಕಾರಿಗಳು | 1 | 1 | 0 | |
| 10 | ಪ್ರಾಥಮಿಕ ಆರೋಗ್ಯ ಕೇಂದ್ರ ಎಂ.ಸಿ.ಹೆಚ್ | ವೈದ್ಯಾಧಿಕಾರಿಗಳು | 1 | 0 | 1 | |

ಜಿಲ್ಲಾ ಆರೋಗ್ಯ ಮತ್ತು ಕು.ಕ.
ಅಧಿಕಾರಿಗಳು, ಬಳ್ಳಾರಿ.

| | | | | | | |
|---|---|---|---|---|---|---|
| 11 | ಪ್ರಾಥಮಿಕ ಆರೋಗ್ಯ ಕೇಂದ್ರ ಕೋಳೂರು | ವೈದ್ಯಾಧಿಕಾರಿಗಳು | 1 | 1 | 0 | |
| 12 | ಪ್ರಾಥಮಿಕ ಆರೋಗ್ಯ ಕೇಂದ್ರ ಸಿದ್ದಮ್ಮನಹಳ್ಳಿ | ವೈದ್ಯಾಧಿಕಾರಿಗಳು | 1 | 1 | 0 | |
| 13 | ಪ್ರಾಥಮಿಕ ಆರೋಗ್ಯ ಕೇಂದ್ರ ಓರ್ವಾಯಿ | ವೈದ್ಯಾಧಿಕಾರಿಗಳು | 1 | 1 | 0 | |
| 14 | ಪ್ರಾಥಮಿಕ ಆರೋಗ್ಯ ಕೇಂದ್ರ ಮುಷ್ಟಗಟ್ಟೆ | ವೈದ್ಯಾಧಿಕಾರಿಗಳು | 1 | 1 | 0 | |
| 15 | ಪ್ರಾಥಮಿಕ ಆರೋಗ್ಯ ಕೇಂದ್ರ ದೇವಸಮುದ್ರ | ವೈದ್ಯಾಧಿಕಾರಿಗಳು | 1 | 1 | 0 | |
| 16 | ಪ್ರಾಥಮಿಕ ಆರೋಗ್ಯ ಕೇಂದ್ರ ರಾಮಸಾಗರ | ವೈದ್ಯಾಧಿಕಾರಿಗಳು | 1 | 1 | 0 | |
| 17 | ಪ್ರಾಥಮಿಕ ಆರೋಗ್ಯ ಕೇಂದ್ರ ಎಸ್.ಆರ್.ಆರ್ ಪುರ (ಶ್ರೀರಾಮರಂಗಾಪುರ) | ವೈದ್ಯಾಧಿಕಾರಿಗಳು | 1 | 1 | 0 | |
| 18 | ಪ್ರಾಥಮಿಕ ಆರೋಗ್ಯ ಕೇಂದ್ರ ಎಮ್ಮಿಗನೂರು | ವೈದ್ಯಾಧಿಕಾರಿಗಳು | 1 | 0 | 1 | (ಗು.ಆ.) (ಅಲ್ಪಾವಧಿಗಾಗಿ ನೇಮಕಾತಿ) |
| 19 | ಪ್ರಾಥಮಿಕ ಆರೋಗ್ಯ ಕೇಂದ್ರ ರಾವಿಹಾಳು | ವೈದ್ಯಾಧಿಕಾರಿಗಳು | 1 | 1 | 0 | |
| 20 | ಪ್ರಾಥಮಿಕ ಆರೋಗ್ಯ ಕೇಂದ್ರ ಸಿರಿಗೇರಿ | ವೈದ್ಯಾಧಿಕಾರಿಗಳು | 1 | 0 | 1 | |
| 21 | ಪ್ರಾಥಮಿಕ ಆರೋಗ್ಯ ಕೇಂದ್ರ ಕರೂರು | ವೈದ್ಯಾಧಿಕಾರಿಗಳು | 1 | 1 | 0 | |
| 22 | ಪ್ರಾಥಮಿಕ ಆರೋಗ್ಯ ಕೇಂದ್ರ ಕುರುವಳ್ಳಿ | ವೈದ್ಯಾಧಿಕಾರಿಗಳು | 1 | 0 | 1 | (ಗು.ಆ.) (ಅಲ್ಪಾವಧಿಗಾಗಿ ನೇಮಕಾತಿ) |
| 23 | ಪ್ರಾಥಮಿಕ ಆರೋಗ್ಯ ಕೇಂದ್ರ ರಾರಾವಿ | ವೈದ್ಯಾಧಿಕಾರಿಗಳು | 1 | 1 | 0 | |
| 24 | ಪ್ರಾಥಮಿಕ ಆರೋಗ್ಯ ಕೇಂದ್ರ ಬಾಗೇವಾಡಿ | ವೈದ್ಯಾಧಿಕಾರಿಗಳು | 1 | 1 | 0 | |
| 25 | ಪ್ರಾಥಮಿಕ ಆರೋಗ್ಯ ಕೇಂದ್ರ ತಾಳೂರು | ವೈದ್ಯಾಧಿಕಾರಿಗಳು | 1 | 0 | 1 | (ಗು.ಆ.) (ಅಲ್ಪಾವಧಿಗಾಗಿ ನೇಮಕಾತಿ) |
| 26 | ಪ್ರಾಥಮಿಕ ಆರೋಗ್ಯ ಕೇಂದ್ರ ಹಚ್ಚೊಳ್ಳಿ | ವೈದ್ಯಾಧಿಕಾರಿಗಳು | 1 | 1 | 0 | |
| 27 | ಪ್ರಾಥಮಿಕ ಆರೋಗ್ಯ ಕೇಂದ್ರ ತಾವರಗೆರ | ವೈದ್ಯಾಧಿಕಾರಿಗಳು | 1 | 0 | 1 | (ಗು.ಆ.) (ಅಲ್ಪಾವಧಿಗಾಗಿ ನೇಮಕಾತಿ) |
| 28 | ಪ್ರಾಥಮಿಕ ಆರೋಗ್ಯ ಕೇಂದ್ರ ಕೋಟಿನೂರು | ವೈದ್ಯಾಧಿಕಾರಿಗಳು | 1 | 1 | 0 | |
| 29 | ಪ್ರಾಥಮಿಕ ಆರೋಗ್ಯ ಕೇಂದ್ರ ಮುದ್ದಟನೂರು | ವೈದ್ಯಾಧಿಕಾರಿಗಳು | 1 | 0 | 1 | (ಗು.ಆ.) (ಅಲ್ಪಾವಧಿಗಾಗಿ ನೇಮಕಾತಿ) |
| 30 | ಪ್ರಾಥಮಿಕ ಆರೋಗ್ಯ ಕೇಂದ್ರ ಬಂಡ್ರಿ | ವೈದ್ಯಾಧಿಕಾರಿಗಳು | 1 | 0 | 1 | (ಗು.ಆ.) (ಅಲ್ಪಾವಧಿಗಾಗಿ ನೇಮಕಾತಿ) |
| 31 | ಪ್ರಾಥಮಿಕ ಆರೋಗ್ಯ ಕೇಂದ್ರ ವಿಠಲಾಪುರ | ವೈದ್ಯಾಧಿಕಾರಿಗಳು | 1 | 1 | 0 | |
| | ಒಟ್ಟು | | 42 | 27 | 15 | |
| 1 | ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ಸಿರುಗುಪ್ಪ, ಸಿರುಗುಪ್ಪ ತಾ॥ | ಮುಖ್ಯ ವೈದ್ಯಾಧಿಕಾರಿಗಳು | 1 | 0 | 1 | |
| 2 | ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ಸಿರುಗುಪ್ಪ, ಸಿರುಗುಪ್ಪ ತಾ॥ | ಜನರಲ್ ಸರ್ಜನ್ | 1 | 0 | 1 | |
| 3 | ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ಸಿರುಗುಪ್ಪ, ಸಿರುಗುಪ್ಪ ತಾ॥ | ಫಿಜಿಸಿಯನ್ | 1 | 1 | 0 | |
| 4 | ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ಸಿರುಗುಪ್ಪ, ಸಿರುಗುಪ್ಪ ತಾ॥ | ಅರವಳಿಕೆ ತಜ್ಞರು | 1 | 1 | 0 | |
| 5 | ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ಸಿರುಗುಪ್ಪ, ಸಿರುಗುಪ್ಪ ತಾ॥ | ಎಲುಬು ಮತ್ತು ಕೀಲು ಮೂಳೆ ತಜ್ಞರು | 1 | 1 | 0 | |
| 6 | ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ಸಿರುಗುಪ್ಪ, ಸಿರುಗುಪ್ಪ ತಾ॥ | ಚರ್ಮರೋಗ ತಜ್ಞರು | 1 | 0 | 1 | |
| 7 | ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ಸಿರುಗುಪ್ಪ, ಸಿರುಗುಪ್ಪ ತಾ॥ | ಸ್ತ್ರೀ ರೋಗ ತಜ್ಞರು | 1 | 1 | 0 | |
| 8 | ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ಸಿರುಗುಪ್ಪ, ಸಿರುಗುಪ್ಪ ತಾ॥ | ಕಿವಿ ಮೂಗು ಗಂಟಲು ತಜ್ಞರು | 1 | 1 | 0 | |
| 9 | ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ಸಿರುಗುಪ್ಪ, ಸಿರುಗುಪ್ಪ ತಾ॥ | ಮಕ್ಕಳ ತಜ್ಞರು | 1 | 0 | 1 | |
| 10 | ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ಸಿರುಗುಪ್ಪ, ಸಿರುಗುಪ್ಪ ತಾ॥ | ನೇತ್ರ ತಜ್ಞ ವೈದ್ಯರು | 1 | 0 | 1 | |
| 11 | ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ಸಿರುಗುಪ್ಪ, ಸಿರುಗುಪ್ಪ ತಾ॥ | ದಂತ ವೈದ್ಯರು | 2 | 2 | 0 | |

ಜಿಲ್ಲಾ ಆರೋಗ್ಯ ಮತ್ತು ಕು.ಕ.
ಅಧಿಕಾರಿಗಳು, ಬಳ್ಳಾರಿ.

| | | | | | | |
|---|---|---|---|---|---|---|
| 12 | ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ಸಿರುಗುಪ್ಪ, ಸಿರುಗುಪ್ಪ ತಾ॥ | | | | | |
| 13 | ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ಸಿರುಗುಪ್ಪ, ಸಿರುಗುಪ್ಪ ತಾ॥ | ದಂತ ವೈದ್ಯರು | - | - | - | |
| 14 | ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ಸಂಡೂರು ಸಂಡೂರು ತಾ॥ | ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳು | 4 | 0 | 4 | |
| 15 | ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ಸಂಡೂರು ಸಂಡೂರು ತಾ॥ | ಮುಖ್ಯ ವೈದ್ಯಾಧಿಕಾರಿಗಳು | 1 | 0 | 1 | |
| 16 | ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ಸಂಡೂರು ಸಂಡೂರು ತಾ॥ | ಸ್ತ್ರೀ ರೋಗ ತಜ್ಞರು | 2 | 0 | 2 | |
| 17 | ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ಸಂಡೂರು ಸಂಡೂರು ತಾ॥ | ಫಿಜಿಶಿಯನ್ | 1 | 1 | 0 | |
| 18 | ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ಸಂಡೂರು ಸಂಡೂರು ತಾ॥ | ಜನರಲ್ ಸರ್ಜರಿ | 1 | 1 | 0 | |
| 19 | ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ಸಂಡೂರು ಸಂಡೂರು ತಾ॥ | ಮಕ್ಕಳ ತಜ್ಞರು | 1 | 0 | 1 | |
| 20 | ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ಸಂಡೂರು ಸಂಡೂರು ತಾ॥ | ಕಿವಿ ಮೂಗು ಗಂಟಲು ತಜ್ಞರು | 1 | 1 | 0 | |
| 21 | ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ಸಂಡೂರು ಸಂಡೂರು ತಾ॥ | ಚರ್ಮರೋಗ ತಜ್ಞರು | 1 | 0 | 1 | |
| 22 | ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ಸಂಡೂರು ಸಂಡೂರು ತಾ॥ | ಎಲುಬು ಮತ್ತು ಕೀಲು ಮೂಳೆ ತಜ್ಞರು | 1 | 1 | 0 | |
| 23 | ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ಸಂಡೂರು ಸಂಡೂರು ತಾ॥ | ಅರವಳಿಕೆ ತಜ್ಞರು | 1 | 1 | 0 | |
| 24 | ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ಸಂಡೂರು ಸಂಡೂರು ತಾ॥ | ನೇತ್ರ ತಜ್ಞ ವೈದ್ಯರು | 1 | 0 | 1 | |
| 25 | ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ಸಂಡೂರು ಸಂಡೂರು ತಾ॥ | ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳು | 3 | 1 | 2 | |
| 26 | ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ಸಂಡೂರು ಸಂಡೂರು ತಾ॥ | ದಂತ ವೈದ್ಯರು | 2 | 2 | 0 | |
| | **ಒಟ್ಟು** | | **32** | **15** | **17** | |
| 1 | ಸಮುದಾಯ ಆರೋಗ್ಯ ಕೇಂದ್ರ ರೂಪನಗುಡಿ ಬಳ್ಳಾರಿ ತಾ॥ | ಆಡಳಿತ ವೈದ್ಯಾಧಿಕಾರಿಗಳು | 1 | 0 | 1 | |
| 2 | ಸಮುದಾಯ ಆರೋಗ್ಯ ಕೇಂದ್ರ ರೂಪನಗುಡಿ ಬಳ್ಳಾರಿ ತಾ॥ | ಸ್ತ್ರೀ ರೋಗ ತಜ್ಞರು | 1 | 1 | 0 | |
| 3 | ಸಮುದಾಯ ಆರೋಗ್ಯ ಕೇಂದ್ರ ರೂಪನಗುಡಿ ಬಳ್ಳಾರಿ ತಾ॥ | ಅರವಳಿಕೆ ತಜ್ಞರು | 1 | 1 | 0 | |
| 4 | ಸಮುದಾಯ ಆರೋಗ್ಯ ಕೇಂದ್ರ ರೂಪನಗುಡಿ ಬಳ್ಳಾರಿ ತಾ॥ | ಮಕ್ಕಳ ತಜ್ಞರು | 1 | 1 | 0 | |
| 5 | ಸಮುದಾಯ ಆರೋಗ್ಯ ಕೇಂದ್ರ ರೂಪನಗುಡಿ ಬಳ್ಳಾರಿ ತಾ॥ | ದಂತ ವೈದ್ಯರು | 1 | 1 | 0 | |
| 6 | ಸಮುದಾಯ ಆರೋಗ್ಯ ಕೇಂದ್ರ ಮೋಕ ಬಳ್ಳಾರಿ ತಾ॥ | ಆಡಳಿತ ವೈದ್ಯಾಧಿಕಾರಿಗಳು | 1 | 1 | 0 | |
| 7 | ಸಮುದಾಯ ಆರೋಗ್ಯ ಕೇಂದ್ರ ಮೋಕ ಬಳ್ಳಾರಿ ತಾ॥ | ಸ್ತ್ರೀ ರೋಗ ತಜ್ಞರು | 1 | 0 | 1 | |
| 8 | ಸಮುದಾಯ ಆರೋಗ್ಯ ಕೇಂದ್ರ ಮೋಕ ಬಳ್ಳಾರಿ ತಾ॥ | ಅರವಳಿಕೆ ತಜ್ಞರು | 1 | 1 | 0 | |
| 9 | ಸಮುದಾಯ ಆರೋಗ್ಯ ಕೇಂದ್ರ ಮೋಕ ಬಳ್ಳಾರಿ ತಾ॥ | ಮಕ್ಕಳ ತಜ್ಞರು | 1 | 0 | 1 | |
| 10 | ಸಮುದಾಯ ಆರೋಗ್ಯ ಕೇಂದ್ರ ಮೋಕ ಬಳ್ಳಾರಿ ತಾ॥ | ದಂತ ವೈದ್ಯರು | 1 | 1 | 0 | |
| 11 | ಸಮುದಾಯ ಆರೋಗ್ಯ ಕೇಂದ್ರ ಕುರುಗೋಡು, ಕುರುಗೋಡು ತಾ॥ | ಆಡಳಿತ ವೈದ್ಯಾಧಿಕಾರಿಗಳು | 1 | 1 | 0 | |
| 12 | ಸಮುದಾಯ ಆರೋಗ್ಯ ಕೇಂದ್ರ ಕುರುಗೋಡು, ಕುರುಗೋಡು ತಾ॥ | ಸ್ತ್ರೀರೋಗ ತಜ್ಞ ವೈದ್ಯರು | 1 | 1 | 0 | |
| 13 | ಸಮುದಾಯ ಆರೋಗ್ಯ ಕೇಂದ್ರ ಕುರುಗೋಡು, ಕುರುಗೋಡು ತಾ॥ | ಅರವಳಿಕೆ ತಜ್ಞರು | 1 | 1 | 0 | |
| 14 | ಸಮುದಾಯ ಆರೋಗ್ಯ ಕೇಂದ್ರ ಕುರುಗೋಡು, ಕುರುಗೋಡು ತಾ॥ | ಮಕ್ಕಳ ತಜ್ಞ ವೈದ್ಯರು | 1 | 1 | 0 | |
| 15 | ಸಮುದಾಯ ಆರೋಗ್ಯ ಕೇಂದ್ರ ಕುರುಗೋಡು, ಕುರುಗೋಡು ತಾ॥ | ದಂತ ವೈದ್ಯರು | 1 | 1 | 0 | |
| 16 | ಸಮುದಾಯ ಆರೋಗ್ಯ ಕೇಂದ್ರ ಕಂಪ್ಲಿ, ಕಂಪ್ಲಿ ತಾ॥ | ಆಡಳಿತ ವೈದ್ಯಾಧಿಕಾರಿಗಳು | 1 | 0 | 1 | |
| 17 | ಸಮುದಾಯ ಆರೋಗ್ಯ ಕೇಂದ್ರ ಕಂಪ್ಲಿ, ಕಂಪ್ಲಿ ತಾ॥ | ಸ್ತ್ರೀರೋಗ ತಜ್ಞವೈದ್ಯರು | 1 | 1 | 0 | |

ಜಿಲ್ಲಾ ಆರೋಗ್ಯ ಮತ್ತು ಕು.ಕ.
ಅಧಿಕಾರಿಗಳು, ಬಳ್ಳಾರಿ.

| | | | | | | |
|---|---|---|---|---|---|---|
| 18 | ಸಮುದಾಯ ಆರೋಗ್ಯ ಕೇಂದ್ರ ಕಂಪ್ಲಿ, ಕಂಪ್ಲಿ ತಾ॥ | ಮಕ್ಕಳ ತಜ್ಞರು | 1 | 1 | 0 | (ಗು.ಆ.) (ಅಲ್ಪಾವಧಿಕಾರಿಗಳ ನೇಮಕಾತಿ) |
| 19 | ಸಮುದಾಯ ಆರೋಗ್ಯ ಕೇಂದ್ರ ಕಂಪ್ಲಿ, ಕಂಪ್ಲಿ ತಾ॥ | ಅರವಳಿಕೆ ತಜ್ಞ ವೈದ್ಯರು | 1 | 1 | 0 | |
| 20 | ಸಮುದಾಯ ಆರೋಗ್ಯ ಕೇಂದ್ರ ಕಂಪ್ಲಿ, ಕಂಪ್ಲಿ ತಾ॥ | ದಂತ ವೈದ್ಯರು | 1 | 1 | 0 | |
| 21 | ಸಮುದಾಯ ಆರೋಗ್ಯ ಕೇಂದ್ರ ತೆಕ್ಕಲಕೋಟೆ, ಸಿರುಗುಪ್ಪ ತಾ॥ | ಆಡಳಿತ ವೈದ್ಯಾಧಿಕಾರಿಗಳು | 1 | 0 | 1 | |
| 22 | ಸಮುದಾಯ ಆರೋಗ್ಯ ಕೇಂದ್ರ ತೆಕ್ಕಲಕೋಟೆ, ಸಿರುಗುಪ್ಪ ತಾ॥ | ಅರವಳಿಕೆ ತಜ್ಞರು | 1 | 0 | 1 | |
| 23 | ಸಮುದಾಯ ಆರೋಗ್ಯ ಕೇಂದ್ರ ತೆಕ್ಕಲಕೋಟೆ, ಸಿರುಗುಪ್ಪ ತಾ॥ | ಮಕ್ಕಳ ತಜ್ಞರು | 1 | 1 | 0 | |
| 24 | ಸಮುದಾಯ ಆರೋಗ್ಯ ಕೇಂದ್ರ ತೆಕ್ಕಲಕೋಟೆ, ಸಿರುಗುಪ್ಪ ತಾ॥ | ಸ್ತ್ರೀರೋಗ ತಜ್ಞವೈದ್ಯರು | 1 | 0 | 1 | |
| 25 | ಸಮುದಾಯ ಆರೋಗ್ಯ ಕೇಂದ್ರ ತೆಕ್ಕಲಕೋಟೆ, ಸಿರುಗುಪ್ಪ ತಾ॥ | ದಂತ ವೈದ್ಯರು | 1 | 1 | 0 | |
| 26 | ಸಮುದಾಯ ಆರೋಗ್ಯ ಕೇಂದ್ರ ತೋರಣಗಲ್ಲು, ಸಂಡೂರು ತಾ॥ | ಆಡಳಿತ ವೈದ್ಯಾಧಿಕಾರಿಗಳು | 1 | 1 | 0 | |
| 27 | ಸಮುದಾಯ ಆರೋಗ್ಯ ಕೇಂದ್ರ ತೋರಣಗಲ್ಲು, ಸಂಡೂರು ತಾ॥ | ಸ್ತ್ರೀರೋಗ ತಜ್ಞವೈದ್ಯರು | 1 | 1 | 0 | |
| 28 | ಸಮುದಾಯ ಆರೋಗ್ಯ ಕೇಂದ್ರ ತೋರಣಗಲ್ಲು, ಸಂಡೂರು ತಾ॥ | ಅರವಳಿಕೆ ತಜ್ಞ ವೈದ್ಯರು | 1 | 0 | 1 | |
| 29 | ಸಮುದಾಯ ಆರೋಗ್ಯ ಕೇಂದ್ರ ತೋರಣಗಲ್ಲು, ಸಂಡೂರು ತಾ॥ | ಮಕ್ಕಳ ತಜ್ಞರು | 1 | 0 | 1 | |
| 30 | ಸಮುದಾಯ ಆರೋಗ್ಯ ಕೇಂದ್ರ ತೋರಣಗಲ್ಲು, ಸಂಡೂರು ತಾ॥ | ದಂತ ವೈದ್ಯರು | 1 | 1 | 0 | |
| | ಒಟ್ಟು | | 30 | 21 | 9 | |

## ABSTRACT

| | | | | | |
|---|---|---|---|---|---|
| 1 | ಡಿ.ಹೆಚ್.ಓ./ಕಾರ್ಯಕ್ರಮಾಧಿಕಾರಿಗಳು | | 9 | 7 | 2 |
| 2 | ಜಿಲ್ಲೆಯ ಎಲ್ಲಾ ತಾಲೂಕು ಆರೋಗ್ಯಾಧಿಕಾರಿಗಳ ಕಛೇರಿ, ಬಳ್ಳಾರಿ/ಸಿರುಗುಪ್ಪ/ಸಂಡೂರು | | 3 | 1 | 2 |
| 3 | ಜಿಲ್ಲೆಯ ಎಲ್ಲಾ ಸಾರ್ವಜನಿಕ ಆಸ್ಪತ್ರೆ. ಸಿರುಗುಪ್ಪ/ಸಂಡೂರು | | 32 | 15 | 17 |
| 4 | ಜಿಲ್ಲೆಯ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವೈದ್ಯರು | | 42 | 27 | 15 |
| 5 | ಜಿಲ್ಲೆಯ ಎಲ್ಲಾ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವೈದ್ಯರು | | 30 | 21 | 9 |
| | ಒಟ್ಟು | | 116 | 71 | 45 |

ಜಿಲ್ಲಾ ಆರೋಗ್ಯ ಮತ್ತು ಕು.ಕ.
ಅಧಿಕಾರಿಗಳು, ಬಳ್ಳಾರಿ.

ಅನುಬಂಧ-2

| Staff Position of Specialists/ Medical Officers working in the District Hospital, Ballari. DH &FWS as on 12.12.2024 | | | | | |
|---|---|---|---|---|---|
| **Sl.No** | **Name of the Post** | **S** | **W** | **V** | **Name of the Doctor** |
| 1 | District Surgeon | 1 | 1 | 0 | Dr. N. BasaReddy |
| 2 | RMO | 1 | 1 | 0 | Dr. Viswanatha .K |
| 3 | Genral Medcine | 2 | 2 | 0 | Dr. Yoganand Reddy. N |
| 4 | | | | | Dr. Sreedhara M.R |
| 5 | Genral Surgery | 2 | 2 | 0 | Dr. Zubair Ahmad K |
| 6 | | | | | Dr. Mallikarjuna |
| 7 | OBG | 6 | 6 | 0 | Dr. Jayapradha S |
| 8 | | | | | Dr. Sardha .G |
| 9 | | | | | Dr. Vijaylakshmi |
| 10 | | | | | Dr. Sarswathi K |
| 11 | | | | | Dr. Poornima M |
| 12 | | | | | Dr. Ashraf Ali M |
| 13 | Anessthetist | 2 | 2 | 0 | Dr. Narendra. B.M |
| 14 | | | | | Dr. abdul gafoor |
| 16 | Paediatric | 3 | 3 | 0 | Dr. Bhavana D |
| 17 | | | | | Dr. Jayalakshmi Nekar |
| 18 | | | | | Dr. Sanjay V. Sajjan |
| 19 | Opthalmologist | 1 | 1 | 0 | Dr. Rohini Chalekar |
| 20 | Orthopedic | 1 | 1 | 0 | Dr. Praksh Bhagvathi |
| 21 | ENT | 1 | 1 | 0 | Dr. Anil Reddy .J |
| 22 | SKIN | 1 | 1 | 0 | Dr. Girish Y.H |
| 23 | Psychiatry | 1 | 1 | 0 | Dr. Girish Babu D.S |
| 24 | Radio | 1 | 1 | 0 | Dr. Aruna Patil |
| 25 | Others Blood bank Officer | 1 | 1 | 0 | Dr. Udya Shankar S.K |
| 26 | Dental | 2 | 2 | 0 | Dr Vishalakshi |
| 27 | | | | | Dr. Prashanth T.R |
| 28 | GDMO | 6 | 4 | 2 | Dr. Gurunath B Chavan |
| 29 | | | | | Dr. Ragvendra .G |
| | | | | | Dr. Manjunath naik S |
| 30 | | | | | Dr. Agha Naser Ahmad |
| Total | | 32 | 30 | 2 | |
| **MCH Hospital, Ballari** | | | | | |
| **Sl.No** | **Name of the Post** | **S** | **W** | **V** | **Name of the Doctor** |
| 1 | Anesthetist | 1 | 1 | 0 | Dr. Dinesh . M |

Place : Ballari
Date: 12.12.2024

District Surgeon
District Hospital, Ballari

ಅನುಬಂಧ-3

**ರಾಜ್ಯದಲ್ಲಿ ಇತ್ತೀಚೆಗೆ ಸಂಭವಿಸಿದ ತಾಯಂದಿರ ಮರಣದ ಕುರಿತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಟಿಪ್ಪಣಿ**

**ಘಟನೆಯ ಸಂಕ್ಷಿಪ್ತ ವರದಿ.**

2024ರ ನವೆಂಬರ್ 11 ರಂದು ಬಳ್ಳಾರಿ ಜಿಲ್ಲಾ ಆಸ್ಪತ್ರೆಯಲ್ಲಿ ತಾಯಂದಿರ ಸಾವು ವರದಿಯಾಗಿದೆ. ನವೆಂಬರ್ 9, 10 ಮತ್ತು 11 ರಂದು ಜಿಲ್ಲಾ ಆಸ್ಪತ್ರೆ ಬಳ್ಳಾರಿಯ ಸಿಸೇರಿಯನ್ ಶಸ್ತ್ರಚಿಕಿತ್ಸಾ ಕೊಠಡಿಯಲ್ಲಿ ನಡೆದ ಶಸ್ತ್ರಚಿಕಿತ್ಸೆ ನಂತರ ಈ ಸಾವುಗಳು ಸಂಭವಿಸಿವೆ ಎಂದು ವರದಿಯಾಗಿದೆ. ಈ 3 ದಿನಗಳಲ್ಲಿ ನಡೆಸಿದ 34 ಸಿಸೇರಿಯನ್ ಆಪರೇಷನ್‌ಗಳಲ್ಲಿ, 07 ಪ್ರಕರಣಗಳು ತೊಂದರೆಗೀಡಾಗಿದ್ದವು. ಮೂತ್ರಪಿಂಡದ ತೊಂದರೆಯಿಂದ ಮತ್ತು ಬಹು ಅಂಗಾಂಗ ವೈಫಲ್ಯತೆ ಕಾರಣಗಳಿಂದ 7 ಪ್ರಕರಣಗಳಲ್ಲಿ, 5 ಬಾಣಂತಿಯರು ಸಾವೀಗೀಡಾಗಿದ್ದು, ಉಳಿದ 2 ಬಾಣಂತಿಯರು ಆಸ್ಪತ್ರೆಯಿಂದ ಬಿಡುಗಡೆಯಾಗಿರುತ್ತಾರೆ.

**ತಂಡದ ಭೇಟಿ**

1. ಘಟನೆ ವರದಿಯಾದ ಕೂಡಲೇ, HFW ಇಲಾಖೆಯು RGUHS ನಿಂದ ನುರಿತ / ತಜ್ಞ ವೈದ್ಯರ ತಂಡವನ್ನು ರಚಿಸಿತು.
2. 14/11/2024 ರಂದು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದಿಂದ ರಚಿತವಾದ ತಜ್ಞ ವೈದ್ಯರ ತಂಡವು ತಾಯಂದಿರ ಮರಣಗಳ ಪರಿಶೀಲನೆಯನ್ನು ನಡೆಸಿ ದಿನಾಂಕ:16/11/2024 ರಂದು ವರದಿಯನ್ನು ಸಲ್ಲಿಸಿರುತ್ತದೆ.

**ತಂಡದ ವರದಿಯು ಈ ಕೆಳಗಿನಂತಿರುತ್ತದೆ.**

a) ಜಿಲ್ಲಾ ಆಸ್ಪತ್ರೆ ಬಳ್ಳಾರಿಯಲ್ಲಿ ವೈದ್ಯಾಧಿಕಾರಿಗಳ ತಂಡ ಸಿಸೇರಿಯನ್ ಆಪರೇಷನ್ ಮಾಡುವಲ್ಲಿ ಯಾವುದೇ ನಿರ್ಲಕ್ಷ್ಯತೆ ಅಥವಾ ಕರ್ತವ್ಯ ಲೋಪ ಎಸಗಿರುವ ಬಗ್ಗೆ ವರದಿಯಲ್ಲಿ ಸೂಚಿಸಿಲ್ಲ. ವರದಿಯ ಪ್ರಕಾರ; ರೋಗಿಗಳ ದಾಖಲಾತಿ, ಸಿಸೇರಿಯನ್ ಶಸ್ತ್ರಚಿಕಿತ್ಸೆ, ತೊಡಕುಗಳ ಗುರುತಿಸುವಿಕೆ ಮತ್ತು ನಿರ್ವಹಣೆಗೆ ಅಗತ್ಯವಾದ ಪ್ರೋಟೋಕಾಲ್‌ಗಳು ಮತ್ತು ಮಾರ್ಗಸೂಚಿಗಳನ್ನು ಪಾಲಿಸಲಾಗಿದೆ.

b) ವರದಿಯಲ್ಲಿನ ಪ್ರಾಸಂಗಿಕ ಪತ್ತೆ (Incidental Finding):
   a) Same batch of antibiotic was continued for all patients.
   b) Intra venous fluid Ringers Lactate (RL) was changed from 9/11/2024. The batch was found to be freezed by GMS (letter dated 23.03.2024) and was un freezed and issued to the District Hospital for use from 24/10/2024.

**ವರದಿಯನ್ನು ಅನುಸರಿಸಿ ಆ.ಕು.ಕ ಇಲಾಖೆಯು ತೆಗೆದುಕೊಂಡ ತುರ್ತು ಮತ್ತು ಮುಂಜಾಗ್ರತಾ ಕ್ರಮಗಳು.**

- ದಿನಾಂಕ:16/11/2024 ರಂದು ತಜ್ಞರ ಸಮಿತಿಯ ವರದಿಯನ್ನು ಸ್ವೀಕರಿಸಿದ ತಕ್ಷಣ, KSMSCL ನಿಂದ ಎಲ್ಲಾ ಹಂತದ ಆರೋಗ್ಯ ಸೌಲಭ್ಯಗಳಲ್ಲಿ ರಿಂಗರ್ ಲ್ಯಾಕ್ಟೇಟ್ ದ್ರಾವಣದ ಬಳಕೆಯನ್ನು (ಎಲ್ಲಾ ಬ್ಯಾಚ್‌ಗಳು) ಹಿಂಪಡೆಯಲಾಗಿದೆ ಹಾಗೂ ರಾಜ್ಯದ ಎಲ್ಲಾ ಆರೋಗ್ಯ

ಸಂಸ್ಥೆಗಳಲ್ಲಿ ಉಳಿದಿರುವ ದ್ರಾವಣವನ್ನು ಜಿಲ್ಲಾ ಮಟ್ಟದ ಔಷಧ [illegible] ಹಿಂಪಡೆಯಲಾಗಿದೆ.

- ಬಳ್ಳಾರಿ ಜಿಲ್ಲಾ ಆಸ್ಪತ್ರೆಯಲ್ಲಿ ಆದ ಘಟನೆಯ ಹಿನ್ನೆಲೆಯಲ್ಲಿ Ringer Lacta… Infusion FFS (500ml) ಔಷಧದ ಕುರಿತಂತೆ ಖರೀದಿ ಹಾಗೂ ಸರಬರಾಜಿನ ಸಂಕ್ಷಿಪ್ತ ವಿವರಗಳನ್ನು (ಅನುಬಂಧ -1) ರಲ್ಲಿ ಅವಗಾಹಿಸುವಂತೆ ಕೋರಿದೆ.

**ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಪರಿಶೀಲನಾ ಸಭೆ.**

- ದಿನಾಂಕ 30.11.2024 ರಂದು ಮಾನ್ಯ ಮುಖ್ಯಮಂತ್ರಿಗಳು ಬಳ್ಳಾರಿ ಜಿಲ್ಲಾ ಆಸ್ಪತ್ರೆಯಲ್ಲಿ ಸಂಭವಿಸಿದ ಬಾಣಂತಿಯರ ಸಾವುಗಳ ಕುರಿತು ಪರಿಶೀಲನಾ ಸಭೆಯನ್ನು ವಿಧಾನಸೌಧದಲ್ಲಿ ನಡೆಸಿರುತ್ತಾರೆ.
- ಸಭೆಯಲ್ಲಿ ನಿರ್ಣಯಿಸಿದಂತ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

**ಸರ್ಕಾರದ ಹಂತದಲ್ಲಿ**

1. ಮಾನ್ಯ ಮುಖ್ಯಮಂತ್ರಿಗಳು ಸಂತ್ರಸ್ತ ಕುಟುಂಬಗಳಿಗೆ 5 ಲಕ್ಷ ಪರಿಹಾರ ಮೊತ್ತವನ್ನು ಘೋಷಿಸಿರುತ್ತಾರೆ.
2. ಪ್ರಕರಣದ ಕುರಿತು Drugs Controller General of India ರವರಿಗೆ ಪತ್ರ ಬರೆಯಲಾಗಿದ್ದು, M/S. Paschim Banga ಕಂಪನಿ ಮತ್ತು ಸಂಬಂಧಿಸಿದವರ ವಿರುದ್ಧ ತನಿಖೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಕೋರಲಾಗಿರುತ್ತದೆ. (ಅನುಬಂಧ -2)
3. ರಿಂಗರ್ ಲ್ಯಾಕ್ಟೆಟ್ ದ್ರಾವಣ ಮಾದರಿ ಪರೀಕ್ಷೆಯಲ್ಲಿ ನಿರ್ಲಕ್ಷ್ಯತೆ ತೋರಿರುವ ಔಷಧ ನಿಯಂತ್ರಕರಾದ ಡಾ.ಉಮೇಶ್ ರವರನ್ನು ಅಮಾನತ್ತುಗೊಳಿಸಲಾಗಿದೆ.
4. ವ್ಯವಸ್ಥಾಪಕ ನಿರ್ದೇಶಕರು (KSMSCL) ಇವರ ಮೇಲೆ ಇಲಾಖಾ ವಿಚಾರಣೆಗೆ showcause ನೋಟೀಸ್ ಜಾರಿ ಮಾಡಲಾಗಿದೆ.
5. KSMSCL ಔಷಧ ಟೆಂಡರ್‌ಗಳಲ್ಲಿ ಉತ್ತಮ ಪ್ರತಿಕ್ರಿಯೆಗಾಗಿ ಹಾಗೂ ಆಡಳಿತವನ್ನು ಚುರುಕುಗೊಳಿಸುವ ಸಲುವಾಗಿ TNSMCL ಮಾದರಿಯಲ್ಲಿ ಟೆಂಡರ್ ಷರತ್ತುಗಳ ಬದಲಾವಣೆ ಮತ್ತು ಮಾನವ ಸಂಪನ್ಮೂಲ (HR) ಗಳ ರಚನೆಯ ಕುರಿತು ಕಾರ್ಯ ನೀತಿ ಟಿಪ್ಪಣಿಯನ್ನು ತಯಾರಿಸಿ ಸಂಪುಟಕ್ಕೆ ಸಲ್ಲಿಸುವ ಕಾರ್ಯ ಪ್ರಗತಿಯಲ್ಲಿದೆ.
6. NABL Accredited ಪ್ರಯೋಗಾಲಯದಲ್ಲಿ ಕೈಗೊಳ್ಳುವ ವಿಧಾನ/ಪದ್ಧತಿಗಳ ಬಗ್ಗೆ ತನಿಖೆಯನ್ನು ಡಾ. ಆಸೀಮಾಬಾನು,(Prof. & HOD) Microbiology, BMCRI ರವರ ನೇತೃತ್ವದಲ್ಲಿ ಕಾರ್ಯ ಪ್ರಗತಿಯಲ್ಲಿರುತ್ತದೆ.
7. ಅಭಿವೃದ್ಧಿ ಆಯುಕ್ತರವರ ಅಧ್ಯಕ್ಷತೆಯಲ್ಲಿ ರಚಿಸಿರುವ ಸಮಿತಿಯ ಮೊದಲ ಸಭೆಯು ದಿನಾಂಕ: 5/12/2024 ರಂದು ನಡೆದಿದ್ದು, ದಿನಾಂಕ:07.12.2024 ರಂದು ಬಳ್ಳಾರಿ ಜಿಲ್ಲಾ ಆಸ್ಪತ್ರೆಗೆ ಭೇಟಿ ನೀಡಿ ಅಲ್ಲಿ ನಡೆದಿರುವ ಘಟನೆಯ ಕುರಿತು ಪರಿಶೀಲಿಸಿರುತ್ತಾರೆ ಈ ಸಮಿತಿಯ ಶಿಫಾರಸಿನಂತೆ ಔಷಧಿಗಳ ಖರೀದಿ ಮತ್ತು ಪರೀಕ್ಷೆಗೆ ಎಂಪ್ಯಾನಲ್ಡ್ ಲ್ಯಾಬೋರೇಟರಿಗಳಿಗೆ ಔಷಧಿಗಳ ಮಾದರಿಗಳನ್ನು ಕಳುಹಿಸುವಲ್ಲಿ ಆಗಿರುವ ನಿಯಮ ಉಲ್ಲಂಘನೆಗಳ ಬಗ್ಗೆ KSMSCL ಅಧಿಕಾರಿಗಳ ಪಾತ್ರ ಮತ್ತು ಲೋಪದೋಷಗಳನ್ನು ಎಸಗಿದ ಅಧಿಕಾರಿಗಳ ಮೇಲೆ ಜವಾಬ್ದಾರಿಗಳನ್ನು ನಿಗದಿ ಮಾಡುವ ಕುರಿತು ಹಾಗೂ ಕರ್ನಾಟಕ ರಾಜ್ಯ ಔಷಧಿ ಸರಬರಾಜು ನಿಗಮದಲ್ಲಿ ಮೂಲ ವ್ಯವಸ್ಥೆಯ ಸುಧಾರಣೆಯನ್ನು ತರಲು ಈಗಾಗಲೇ ಶ್ರೀಮತಿ ಎಂ. ಕನಗವಲ್ಲಿ, ಭಾ.ಆ.ಸೇ, ವ್ಯವಸ್ಥಾಪಕ

ನಿರ್ದೇಶಕರು, ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ, ಬೆಂಗಳೂರು ಇವರ ನೇತೃತ್ವದಲ್ಲಿ ಪರಿಶೀಲನಾ ತಂಡವನ್ನು ರಚಿಸಿ ಆದೇಶಿಸಲಾಗಿದೆ.

8. RGUHS ತಜ್ಞರನ್ನು ಒಳಗೊಂಡ, ಅಭಿಯಾನ ನಿರ್ದೇಶಕರು, ರಾಷ್ಟ್ರೀಯ ಆರೋಗ್ಯ ಅಭಿಯಾನ ರವರ ನೇತೃತ್ವದ ಸಮಿತಿಯು ಪ್ರಸುತ್ತ ವರ್ಷದಲ್ಲಿ ರಾಜ್ಯದ ಆಸ್ಪತ್ರೆಗಳಲ್ಲಿ ಸಂಭವಿಸಿದ ಎಲ್ಲಾ ತಾಯಿ ಮರಣಗಳ ಬಗ್ಗೆ ಲೆಕ್ಕ ಪರಿಶೋಧಿಸಿ (Death Audit) ವರದಿ ನೀಡಲು ಸರ್ಕಾರವು ಆದೇಶಿಸಿರುತ್ತದೆ.

**<u>KSMSCL ಹಂತದಲ್ಲಿ</u>**

1. ಬಳ್ಳಾರಿ ಜಿಲ್ಲೆಗೆ ಒಟ್ಟು 19 RL ಬ್ಯಾಚ್‌ಗಳನ್ನು ಸರಬರಾಜು ಮಾಡಲಾಗಿದೆ. 19 ಬ್ಯಾಚ್‌ಗಳಲ್ಲಿ BET ಪರೀಕ್ಷೆಗಾಗಿ BMCRI ಗೆ 10 ಬ್ಯಾಚ್‌ಗಳು ಕಳುಹಿಸಲಾಗಿದ್ದು, BMCRI ನಲ್ಲಿ 5 ಬ್ಯಾಚ್‌ಗಳನ್ನು ಪರೀಕ್ಷಿಸಲಾಗಿ 4 ಬ್ಯಾಚ್‌ಗಳು ಉತ್ತಮ ಗುಣಮಟ್ಟದ ಔಷಧಗಳೆಂದು ಮತ್ತು 1 ಬ್ಯಾಚ್ ಉತ್ತಮ ಗುಣಮಟ್ಟವಲ್ಲದ ಔಷಧವೆಂದು (NSQ) ಘೋಷಿಸಲಾಗಿದೆ. NABL ಮಾನ್ಯತೆ ಪಡೆದ M/s. Vimta lab, Hyderabad ನಲ್ಲಿ 9 ಬ್ಯಾಚ್‌ಗಳನ್ನು BET ಪರೀಕ್ಷೆಗೆ ಒಳಪಡಿಸಿದ್ದು, 3 ಬ್ಯಾಚ್‌ಗಳು ಉತ್ತಮ ಗುಣಮಟ್ಟದ ಔಷಧಗಳೆಂದು ಮತ್ತು 6 ಬ್ಯಾಚ್‌ಗಳು ಗುಣಮಟ್ಟವಲ್ಲದ ಔಷಧವೆಂದು ಘೋಷಿಸಲಾಗಿದೆ. ಔಷಧ ನಿಯಂತ್ರಣ ಇಲಾಖೆಯಿಂದ ಬಳ್ಳಾರಿಯ 19 ಬ್ಯಾಚ್‌ಗಳನ್ನು BET ಪರೀಕ್ಷೆಗೆ ಒಳಪಡಿಸಿದ್ದು, ಅವುಗಳಲ್ಲಿ 17 ಬ್ಯಾಚ್‌ಗಳು ಉತ್ತಮ ಗುಣಮಟ್ಟದ ಔಷಧಗಳೆಂದು ಮತ್ತು 2 ಬ್ಯಾಚ್‌ಗಳು ಉತ್ತಮ ಗುಣಮಟ್ಟವಲ್ಲದ ಔಷಧವೆಂದು (NSQ) ಘೋಷಿಸಲಾಗಿದೆ.. ಇನ್ನುಳಿದ ಬ್ಯಾಚ್‌ಗಳನ್ನು ಪರೀಕ್ಷೆಗೆ ಒಳಪಡಿಸುವ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.
2. ಸದರಿ Ringer Lactate IV Fluid ಗಳನ್ನು ಎಲ್ಲಾ ಆಸ್ಪತ್ರೆಗಳಿಂದ KSMSCL ಜಿಲ್ಲಾ ಉಗ್ರಾಣಗಳಿಗೆ ಹಿಂಪಡೆಯುವ ಕಾರ್ಯ ಪ್ರಗತಿಯಲ್ಲಿದ್ದು, ಈಗಾಲೇ 97 ಬ್ಯಾಚ್ ಗಳ ಮಾದರಿಗಳನ್ನು ಪರೀಕ್ಷೆಗಾಗಿ BMCRI ಗೆ ಕಳುಹಿಸಲಾಗಿದ್ದು, ಪರೀಕ್ಷೆ ಕಾರ್ಯ ಪ್ರಗತಿಯಲ್ಲಿರುತ್ತದೆ.
3. M/s. Paschim Banga Pharmaceutical Ltd ಸಂಸ್ಥೆಯು ಸರಬರಾಜು ಮಾಡಿದ Ringer Lactate IV Fluid ಔಷಧವನ್ನು ಕಪ್ಪುಪಟ್ಟಿಗೆ (Black list) ಸೇರಿಸಿ ಆದೇಶಿಸಲಾಗಿರುತ್ತದೆ. NABLಮಾನ್ಯತೆ ಪಡೆದ KSMSCL ನ empenelled ಪ್ರಯೋಗಾಲಯವು ಉತ್ತಮ ಗುಣಮಟ್ಟದ ಔಷಧಿ ಎಂದು ಪ್ರಮಾಣೀಕರಿಸಿದ ಔಷಧವನ್ನು ಔಷಧ ನಿಯಂತ್ರಣ ಇಲಾಖೆಯು ಉತ್ತಮ ಗುಣಮಟ್ಟವಲ್ಲದ ಔಷಧ ಎಂದು ಪ್ರಮಾಣೀಕರಿಸಿರುತ್ತದೆ. ಈ ಕಾರಣದಿಂದ KSMSCL ಗೆ ಪರೀಕ್ಷೆ ಮಾಡಿ ಗುಣಮಟ್ಟ ಪ್ರಮಾಣೀಕರಿಸಿದ ಪ್ರಯೋಗಾಲಯಗಳಿಗೆ ಭೇಟಿ ನೀಡಿ ಪರಿಶೀಲಿಸಿ ವರದಿ ನೀಡಲು ಔಷಧ ನಿಯಂತ್ರಣ ಇಲಾಖೆಯನ್ನು ಕೋರಲಾಗಿದೆ. ಸದರಿ ಪರಿಶೀಲನಾ ವರದಿಯ ಆಧಾರದ ಮೇಲೆ ಪ್ರಯೋಗಾಲಯಗಳ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡುವ ಬಗ್ಗೆ ಕ್ರಮವಹಿಸಲಾಗುವುದು.
4. ಸಂತ್ರಸ್ತ ಕುಟುಂಬಗಳಿಗೆ ಪರಿಹಾರ ನೀಡುವ ಕುರಿತು KSMSCL ನಿಂದ M/S Paschim Banga Pharmaceutical Ltd ಸಂಸ್ಥೆಗೆ ನೋಟಿಸ್ ನೀಡಲಾಗಿರುತ್ತದೆ .
5. ದಿನಾಂಕ 30/11/2024 ರಂದು ನಡೆದ Zoom meeting ನಲ್ಲಿ ಬಳ್ಳಾರಿ ಜಿಲ್ಲಾ ಶಸ್ತ್ರ ಚಿಕಿತ್ಸಕರು ಸದರಿ ಔಷಧದ ಅಡ್ಡಪರಿಣಾಮದ ಕುರಿತು ಮಾಹಿತಿ ನೀಡಿದರು. M/S Paschim Banga Pharmaceutical Ltd ಸಂಸ್ಥೆಯು ಸರಬರಾಜು ಮಾಡಿರುವ Dextrose with Sodium Chloride ಔಷಧವನ್ನು ಔಷಧ ನಿಯಂತ್ರಣ ಇಲಾಖೆಯಿಂದ ಗುಣಮಟ್ಟದ ವಿಶ್ಲೇಷಣ ಪರೀಕ್ಷೆಗೆ ಒಳಪಡಿಸಲಾಗಿದ್ದು, ಎರಡು ಬ್ಯಾಚ್‌ಗಳು NSQ ಎಂದು ವರದಿ ಬಂದಿದ್ದರಿಂದ ಸದರಿ ಸಂಸ್ಥೆಯ Dextrose with Sodium Chloride ಔಷಧವನ್ನು ಕಪ್ಪುಪಟ್ಟಿಗೆ ಸೇರಿಸುವ ಕುರಿತು ನೋಟಿಸ್ ನೀಡಿ ಸಾರ್ವಜನಿಕ ಆರೋಗ್ಯದ ಹಿತದೃಷ್ಟಿಯಿಂದ ಈ ಸಂಸ್ಥೆ ಪೂರೈಸಿದ ಇತರ

ಔಷಧಗಳನ್ನು ಉಪಯೋಗಿಸದಂತೆ ದಿನಾಂಕ 30/11/2024 ರಂದು ತಾತ್ಕಾಲಿಕವಾಗಿ ತಡೆಹಿಡಿಯಲಾಗಿರುತ್ತದೆ. ಮುಂದುವರೆದು M/S Paschim Banga Pharmaceutical Ltd ಸಂಸ್ಥೆಯು ಸರಬರಾಜು ಮಾಡಿರುವ Dextrose with Sodium Chloride ಔಷಧವನ್ನು ಕಪ್ಪುಪಟ್ಟಿಗೆ ಸೇರಿಸಿ ಆದೇಶಿಸಲಾಗಿರುತ್ತದೆ.

**ಔಷಧ ನಿಯಂತ್ರಕರು, ಔಷಧ ನಿಯಂತ್ರಣ ಇಲಾಖೆಯ ಹಂತದಲ್ಲಿ:**

1. ದಿನಾಂಕ: 06-12-2024 ರಂದು ನಡೆದ ಸಚಿವ ಸಂಪುಟದ ಸಭೆಯಲ್ಲಿ, ಔಷಧ ನಿಯಂತ್ರಣ ಇಲಾಖೆಯನ್ನು ಮತ್ತು ಆಹಾರ ಸುರಕ್ಷತಾ ಇಲಾಖೆಯನ್ನು ವಿಲೀನಗೊಳಿಸಿ IAS ಅಧಿಕಾರಿಯನ್ನು ಇಲಾಖಾ ಏಕ ಮುಖ್ಯಸ್ಥರನ್ನಾಗಿ (HOD) ನೇಮಿಸಲು ಸಚಿವಸಂಪುಟವು ಅನುಮೋದಿಸಿರುತ್ತದೆ. ಈ ಬಗ್ಗೆ ದಿನಾಂಕ 12.12.2024 ಸರ್ಕಾರ ಆದೇಶ ಹೊರಡಿಸಿರುತ್ತದೆ.
2. ಔಷಧ ನಿಯಂತ್ರಣಾ ಇಲಾಖೆ 6 ಅಧಿಕಾರಿಗಳು I.V Ringer Lactate ಔಷಧಿಯ ಗುಣಮಟ್ಟವಲ್ಲದ 22 ಬ್ಯಾಚ್‌ಗಳಲ್ಲಿ, ನಾಲ್ಕು ಬ್ಯಾಚ್‌ಗಳಿಗೆ CDL ಈಗಾಲೇ ಉತ್ತಮ ಗುಣಮಟ್ಟದ ಔಷಧವೆಂದು ಘೋಷಿಸಿದೆ. 5 ಬ್ಯಾಚ್ ಗಳು CDL ಪರೀಕ್ಷಾ ವರದಿಯ ನಿರೀಕ್ಷೆಯಲ್ಲಿದ್ದು, 4 ಬ್ಯಾಚ್‌ಗಳು ಮೇಲ್ಮನವಿ ಹಂತದಲ್ಲಿವೆ. ಉಳಿದ ಉತ್ತಮ ಗುಣಮಟ್ಟವಲ್ಲದ 9 ಬ್ಯಾಚ್‌ಗಳ ವಿರುದ್ಧ ತಯಾರಿಕಾ ಘಟಕದ ಹಂತದವರೆಗೆ ತನಿಖೆಯನ್ನು ಪೂರ್ಣಗೊಳಿಸಿದ್ದು, ಸದರಿ ಸಂಸ್ಥೆಯ ವಿರುದ್ಧ ದಿನಾಂಕ: 4/12/2024 ರಿಂದ 6/12/2024 ರವರೆಗೆ ಸ್ಥಳೀಯ ತನಿಖೆ ಕೈಗೊಂಡು 7/12/2024 ಕ್ಕೆ ವರದಿ ಸಲ್ಲಿಸಿದ್ದಾರೆ. ಈ ವರದಿ ಆಧಾರದ ಮೇಲೆ ಪ್ರಕರಣ ದಾಖಲಿಸಲು ಅನುಮತಿ ನೀಡಲಾಗಿದೆ. ಹಾಲಿ 9 ಪ್ರಕರಣಗಳಲ್ಲಿ ದಿನಾಂಕ 9.12.2024 ರವರೆಗೆ ಎಲ್ಲಾ 9 ಪ್ರಕರಣಗಳಲ್ಲಿ ಮೊಕದ್ದಮೆಗಳನ್ನು JMFC ನ್ಯಾಯಾಲಯಲ್ಲಿ ಹೂಡಲಾಗಿರುತ್ತದೆ.
3. ಕೆ.ಎಸ್.ಎಂ.ಎಸ್.ಸಿ.ಎಲ್ ಗೆ ಐ.ವಿ ದ್ರಾವಣ ಸರಬರಾಜು ಮಾಡಿದ ಸಂರ್ಭದಲ್ಲಿ ಸರಬರಾಜುದಾರರು ಎಲ್ಲಾ ಬ್ಯಾಚ್‌ಗಳನ್ನು In-house Laboratory ಯಿಂದ ಪರೀಕ್ಷಿಸಿ ಹಾಗೂ National Accreditation Board for Testing and Calibration Laboratories (NABL) ಪ್ರಮಾಣಿತ ಪ್ರಯೋಗಾಲಯದಿಂದ ಪರೀಕ್ಷಿಸಿ ಉತ್ತಮ ಗುಣಮಟ್ಟದ ಔಷಧ ಎಂದು ಪ್ರಮಾಣೀಕರಿಸಿದ ವರದಿ ಸಲ್ಲಿಸಲಾಗಿರುತ್ತದೆ. ಮುಂದುವರೆದು, ಕೆ.ಎಸ್.ಎಂ.ಎಸ್.ಸಿ.ಎಲ್ ನ NABL ಪ್ರಮಾಣಿತ Empanelled Laboratory ಆದ M/s Devansh Testing and research laboratory ಯಿಂದ ಗುಣಮಟ್ಟ ಪರೀಕ್ಷೆಗೆ ಒಳಪಡಿಸಿದ ಎಲ್ಲಾ ಬ್ಯಾಚ್‌ಗಳು ಉತ್ತಮ ಗುಣಮಟ್ಟವೆಂದು ಪ್ರಮಾಣೀಕರಿಸಲ್ಪಟ್ಟಿವೆ. ನಂತರ ಎರಡನೇ ಬಾರಿಗೆ ಕೆ.ಎಸ್.ಎಂ.ಎಸ್.ಸಿ.ಎಲ್ ನ ಇತರ NABL Empanelled Labouratary ಗಳಾದ M/s Standard Laboratory ಹಾಗೂ M/s Vorick Lab Pvt Ltd ಯಿಂದ ವಿವಿಧ ಸಂಖ್ಯೆಯಲ್ಲಿ ಸಂಪೂರ್ಣವಾಗಿ ಪರೀಕ್ಷಿಸಿದ್ದು, ಇಲ್ಲಿಯೂ ಉತ್ತಮ ಗುಣಮಟ್ಟದ ಔಷಧವೆಂದು ಸಾಬೀತಾಗಿರುತ್ತದೆ.
4. ಔಷಧ ನಿಯಂತ್ರಣ ಇಲಾಖೆಯು ಈ ಹಿಂದೆ I.V Ringer Lactate ಔಷಧದ 81 ಮಾದರಿಗಳನ್ನು ಪರೀಕ್ಷೆಗೆ ಒಳಪಡಿಸಿದ್ದು, ಅವುಗಳಲ್ಲಿ 59 ಮಾದರಿಗಳು ಉತ್ತಮ ಗುಣಮಟ್ಟದ ಔಷಧವೆಂದು, ಹಾಗೂ 22 ಉತ್ತಮ ಗುಣಮಟ್ಟವಲ್ಲದ ಔಷಧ ಎಂದು ಗುಣ ವಿಶ್ಲೇಷಣ ವರದಿ ಬಂದಿರುತ್ತದೆ. ಗುಣಮಟ್ಟವಲ್ಲದ ಔಷಧ ಎಂದು ನಿರ್ಧರಿಸಿದ ಔಷಧ ನಿಯಂತ್ರಣ ಇಲಾಖೆಯ ವರದಿಗಳ ವಿರುದ್ಧ ಕಾಯ್ದೆಯಲ್ಲಿ ಅವಕಾಶವಿರುವಂತೆ ಸರಬರಾಜುದಾರರು ನಾಲ್ಕು ಬ್ಯಾಚ್‌ಗಳನ್ನು ಅಪೀಲ್ ಮೂಲಕ Central Drugs Laboratory (CDL) ನಲ್ಲಿ ಮರು ಪರೀಕ್ಷೆಗೆ ಒಳಪಡಿಸಿದ್ದು, ನಾಲ್ಕು ಬ್ಯಾಚ್‌ಗಳು ಉತ್ತಮ ಗುಣಮಟ್ಟದ ಔಷಧ ಎಂದು ಪ್ರಮಾಣೀಕರಿಸಲ್ಪಟ್ಟಿರುತ್ತವೆ.

5. ದಿನಾಂಕ 30/11/2024 ನಂತರ ಔಷಧ ನಿಯಂತ್ರಣ ಇಲಾಖೆ ಈ ಹಿಂದೆ ಪರೀಕ್ಷಿಸಿದ ಬ್ಯಾಚ್‌ಗಳನ್ನು ಹೊರತುಪಡಿಸಿ 102 ಮಾದರಿಗಳನ್ನು ಪರೀಕ್ಷೆಗಾಗಿ ಸಂಗ್ರಹಿಸಲಾಗಿರುತ್ತದೆ. ಅವುಗಳಲ್ಲಿ 72 ಮಾದರಿಗಳು BET ಪರೀಕ್ಷೆಯಲ್ಲಿ ಉತ್ತಮ ಗುಣಮಟ್ಟದ ಔಷಧಿಗಳಾಗಿದ್ದು, 16 ಮಾದರಿಗಳು BET ಪರೀಕ್ಷೆಯಲ್ಲಿ ಉತ್ತಮ ಗುಣಮಟ್ಟವಲ್ಲದ ಔಷಧಿಗಳಾಗಿರುತ್ತವೆ. ಉಳಿದ 14 ಬ್ಯಾಚ್‌ಗಳ ವರದಿ ನಿರೀಕ್ಷೆಯಲ್ಲಿರುತ್ತದೆ. ಇವುಗಳ Sterility ಪರೀಕ್ಷೆಗೆ ಸಮಯಾವಕಾಶ ಬೇಕಾಗಿದ್ದು, ವರದಿ ಬಂದ ನಂತರ ಸೂಕ್ತ ಕ್ರಮಕೈಗೊಳ್ಳಲಾಗುವುದು.

6. Ringer Lactate IV Fluid ಅನ್ನು ಕೆ.ಎಸ್.ಎಂ.ಎಸ್.ಸಿ.ಎಲ್ ಗೆ ಸರಬರಾಜು ಮಾಡಿದ ಕಂಪನಿಯು ಪಶ್ಚಿಮ ಬಂಗಾಳ ರಾಜ್ಯದಲ್ಲಿದ್ದು, ಸದರಿ ಕಂಪನಿಯು ಆ ರಾಜ್ಯದ ಔಷಧ ನಿಯಂತ್ರಣ ಇಲಾಖೆ ಮತ್ತು DCGI ರವರ ಜಂಟಿ ನಿಯಂತ್ರಣಕ್ಕೆ ಒಳಪಟ್ಟಿರುತ್ತದೆ. ದಿನಾಂಕ: 04.12.2024 ರಿಂದ 06.12.2024 ರವರೆಗೆ ರಾಜ್ಯದ ಔಷಧ ನಿಯಂತ್ರಣ ಇಲಾಖೆ ಅಧಿಕಾರಿಗಳು ಹಾಗೂ Central Drugs Standard Control Organization (CDSCO) ಇವರುಗಳು ಔಷಧದ ಉತ್ಪಾದನ ಸ್ಥಳದಲ್ಲಿ ಜಂಟಿ ತನಿಖೆಯನ್ನು ನಡೆಸಿ ಅಲ್ಲಿರುವಂತಹ ಅಸಮರ್ಪಕ ನಿರ್ವಹಣೆಯಿಂದ ಔಷಧ ಉತ್ಪಾದನೆ ಮಾಡದಂತೆ ಉತ್ಪಾದಕರಿಗೆ ನೋಟೀಸ್ ನೀಡಿ ಉತ್ಪಾದನೆ ಮಾಡುವುದನ್ನು ನಿಲ್ಲಿಸಿರುತ್ತಾರೆ. (ಅನುಬಂಧ-3)

ಇದರೊಂದಿಗೆ,

ಕರ್ನಾಟಕ ರಾಜ್ಯದಲ್ಲಿ ಕಳೆದ 5 ವರ್ಷದ ತಾಯಿ ಮರಣ ಹಾಗೂ ಪ್ರಮಾಣಗಳನ್ನು ಕೆಳಗೆ ಉಲ್ಲೇಖಿಸಲಾಗಿದೆ.

| ವರ್ಷ | ಒಟ್ಟು ತಾಯಿ ಮರಣ ಪ್ರಕರಣಗಳು | ತಾಯಿ ಮರಣ ಪ್ರಮಾಣ |
|---|---|---|
| 2019-20 | 662 | 74 |
| 2020-21 | 714 | 84 |
| 2021-22 | 594 | 68 |
| 2022-23 | 527 | 65 |
| 2023-24 | 518 | 64 |
| 2024-25(ನವೆಂಬರ್ ವರೆಗೆ) | 348 | 64 |

ತಾಯಿ ಶಿಶು ಮರಣ ಪ್ರಮಾಣವನ್ನು ತಗ್ಗಿಸಲು ಇಲಾಖೆ ನಿರಂತರ ಕ್ರಮಗಳನ್ನು ಕೈಗೊಂಡಿದೆ, ಈ ಹಿನ್ನೆಲೆಯಲ್ಲಿ ತಾಯಿ ಶಿಶು ಮರಣ ಪ್ರಮಾಣ ಇಳಿಕೆಯಾಗುತ್ತಿದೆ.

(ದಿನೇಶ್ ಗುಂಡೂರಾವ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು
ಕರ್ನಾಟಕ ಸರ್ಕಾರ